# ರಮ್ಯಾ ಕೊಟ್ಟ ಸಿಹಿಶಾಕ್!

■ ಪದ್ಮನಾಭ ಭಟ್

'ರಮ್ಯಾ ಮತ್ತೆ ಸಿನಿಮಾ ಮಾಡ್ತಿದ್ದಾರಂತೆ' ಹೀಗೊಂದು ಸುದ್ದಿ ಕಳೆದ ಕೆಲವು ತಿಂಗಳಿಂದ ಗಾಂಧಿನಗರ ಗಲ್ಲಿಗಳಲ್ಲಿ ಕೇಳಿಬರುತ್ತಿತ್ತು. ಆ ಸುದ್ದಿ ಗಾಳಿಯಲ್ಲಿ ಹಾರಿ ಮಾಧ್ಯಮಗಳಲ್ಲಿ ಹೆಜ್ಜೆಯೂರಿ ಅವರ ಅಭಿಮಾನಿಗಳ ಎದೆಯಲ್ಲಿ ರೆಕ್ಕೆಯನ್ನು ಫಡಫಡಿಸಿದ್ದೂ ಆಗಿತ್ತು. ಅದಕ್ಕೆ ಪುಷ್ಟಿಯೊದಗಿಸುವಂತೆ, ಹಲವು ವರ್ಷಗಳಿಂದ ಕನ್ನಡ ಚಿತ್ರರಂಗದ ಜೊತೆಗೆ ಬಹುತೇಕ ಸಂಪರ್ಕ ಕಡಿದುಕೊಂಡಿದ್ದ ಅವರು ಮತ್ತೆ ಚಂದನವನದಲ್ಲಿ ಅಲ್ಲಲ್ಲಿ ಖಾಸಗಿ ಕಾರ್ಯಕ್ರಮಗಳಲ್ಲಿ, ಚಿತ್ರೀಕರಣದ ಸೆಟ್‌ಗಳಲ್ಲಿ ಕಾಣಿಸಿಕೊಂಡು ಮೋಹಕನಗೆಯನ್ನು ಬೀರತೊಡಗಿದ್ದರು. ಅವರ ಟ್ವಿಟರ್ ಖಾತೆಯಲ್ಲಿ ಕನ್ನಡ ಚಿತ್ರಗಳಿಗೆ, ಕಲಾವಿದರಿಗೆ ಶುಭಕೋರುವ ಟ್ವೀಟ್‌ಗಳು ಕಾಣಿಸಿಕೊಳ್ಳಲು ಆರಂಭಿಸಿದ್ದವು. ಇದನ್ನೆಲ್ಲ ನೋಡಿದ ಅವರ ಅಭಿಮಾನಿಗಳು ಮತ್ತೆ ಬ್ಯೂಟಿ ಕ್ವೀನ್ ಅನ್ನು ತೆರೆಯ ಮೇಲೆ ನೋಡಬಹುದು ಎಂಬ ನಿರೀಕ್ಷೆಯ ಗಿಡವನ್ನು ಮನಸಲ್ಲಿ ನೆಟ್ಟುಕೊಂಡು ಕಾಯುತ್ತಿದ್ದರು. ರಮ್ಯಾ ಮತ್ತೆ ಸಿನಿಮಾ ಮಾಡ್ತಾರೆ ಎಂಬ ಮಾತು ದಟ್ಟವಾಗಿ ಕೇಳಿಬರುತ್ತಿದ್ದವು.

ಈ ನಿರೀಕ್ಷೆಯಲ್ಲಿದ್ದವರಿಗೆ ಗಣೇಶ ಚತುರ್ಥಿಯ ದಿನ ರಮ್ಯಾ ಒಂದು ಸುದ್ದಿ ಕೊಟ್ಟಿದ್ದಾರೆ. ಆ ಸುದ್ದಿಯಲ್ಲಿ ಸಿಹಿಯೂ ಇದೆ ಶಾಕ್ ಕೂಡ ಇದೆ. ಅಭಿಮಾನಿಗಳ, ಚಿತ್ರರಂಗದವರ ನಿರೀಕ್ಷೆಯಂತೆ ರಮ್ಯಾ ಮತ್ತೆ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ. ಆದರೆ ಅವರ ನಿರೀಕ್ಷೆಯಂತೆ ನಟನೆಯ ಮೂಲಕ ಅಲ್ಲ; ನಿರ್ಮಾಪಕಿಯಾಗಿ!

'ಆ್ಯಪಲ್ ಬಾಕ್ಸ್ ಸ್ಟೂಡಿಯೋಸ್' ಇದು ರಮ್ಯಾ ತಮ್ಮ ನಿರ್ಮಾಣಸಂಸ್ಥೆಗೆ ಇಟ್ಟುಕೊಂಡಿರುವ ಹೆಸರು. ಗಣೇಶ ಚತುರ್ಥಿಯ ದಿನ ಈ ಕುರಿತು ತಮ್ಮ ಸೋಷಿಯಲ್ ಮೀಡಿಯಾ ಖಾತೆಗಳಲ್ಲಿ ಒಂದು ಪ್ರಕಟಣೆ ಹೊರಡಿಸಿರುವ ರಮ್ಯಾ, 'ನಾನು ಚಿತ್ರರಂಗಕ್ಕೆ ಹಿಂತಿರುಗುತ್ತಿದ್ದೇನೆ' ಎಂದು ಸ್ಪಷ್ಟಪಡಿಸಿರುವುದಷ್ಟೇ ಅಲ್ಲದೆ, ತಮ್ಮ ನಿರ್ಮಾಣ ಸಂಸ್ಥೆಯ ಹೆಸರಿನ ಕುರಿತೂ ವಿವರಣೆ ನೀಡಿದ್ದಾರೆ.

'ಏನಿದು ಆ್ಯಪಲ್ ಬಾಕ್ಸ್? ಅದೊಂದು ಸಾಧಾರಣವಾದ, ಆದರೆ ಅಷ್ಟೇ ಉಪಯುಕ್ತವಾದ ಪುಟ್ಟ ಮರದ ಪೆಟ್ಟಿಗೆ. ನನ್ನ ಚಿತ್ರರಂಗದ ಪಯಣದುದ್ದಕ್ಕೂ ನಿರಂತರವಾಗಿ ಆ್ಯಪಲ್ ಬಾಕ್ಸ್ ಜೊತೆಗಿದೆ. ಸೆಟ್‌ನಲ್ಲಿ ಕೂರಲು ಕುರ್ಚಿಗಳಿಲ್ಲದೆ ಇದ್ದಾಗ ಅಥವಾ ಕ್ಯಾಮೆರಾದ, ಇಲ್ಲವೇ ನಟರ ಎತ್ತರ ಹೆಚ್ಚಿಸಬೇಕಾದಾಗ ಈ ಆಪಲ್ ಬಾಕ್ಸ್ ನೆರವಿಗೆ ಬರಲಿದೆ. ಈ ಪೆಟ್ಟಿಗೆಯ ಸರಳತೆ ನನಗೆ ಸದಾ ಸ್ಫೂರ್ತಿಯನ್ನು ನೀಡಿದೆ' ಎಂದು ಅವರು ಬರೆದುಕೊಂಡಿದ್ದಾರೆ.

ಒಟಿಟಿ ಪ್ಲ್ಯಾಟ್‌ಫಾರಂಗಳಿಗಾಗಿ ಸಿನಿಮಾ ಹಾಗೂ ವೆಬ್ ಸಿರೀಸ್‌ಗಳನ್ನು ಈ ಸಂಸ್ಥೆ ನಿರ್ಮಿಸಲಿದೆಯಂತೆ. ಈಗ ಆ್ಯಪಲ್ ಬಾಕ್ಸ್ ಸ್ಟೂಡಿಯೋಸ್‌ನಿಂದ ಎರಡು ಸಿನಿಮಾಗಳು ನಿರ್ಮಾಣವಾಗುತ್ತಿವೆಯಂತೆ. ಈ ಎರಡೂ ಸಿನಿಮಾಗಳು ಕೆ.ಆರ್.ಜಿ. ಸಂಸ್ಥೆಯ ಮೂಲಕ ವಿತರಣೆಗೊಂಡು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿವೆಯಂತೆ.

ಇಷ್ಟು ಸುದ್ದಿಯನ್ನು ಹಂಚಿಕೊಂಡಿರುವ ರಮ್ಯಾ, ಇನ್ನು ಮುಂದೆ ನಿರಂತರವಾಗಿ ಕನ್ನಡ ಚಿತ್ರರಂಗದಲ್ಲಿ ತೊಡಗಿಕೊಳ್ಳುವ ಸೂಚನೆಯನ್ನಂತೂ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಅವರು ತಮ್ಮ ನಿರ್ಮಾಣದ ಸಿನಿಮಾಗಳ ಮೂಲಕವೇ ಮತ್ತೆ ನಟನೆಗೆ ಮರಳಿದರೂ ಅಚ್ಚರಿಯೇನಿಲ್ಲ. ಅದು ಸಾಧ್ಯವಾದರೆ ಅವರ ಅಭಿಮಾನಿಗಳಲ್ಲಿ ಈಗ ಉಳಿದಿರುವ ಸಣ್ಣ ಅತೃಪ್ತಿಯ ಕಿಡಿಯೂ ಆರಿಹೋಗಲಿದೆ. ■

